# ಯುವಸ್ಪಂದನ


## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ

*(ಮಾರ್ಚ್ ಸಂಚಿಕೆಯಿಂದ ಮುಂದುವರೆದುದು)*

### ವಿದ್ಯಾರ್ಥಿಗಳ ಸಾಮಾಜಿಕ ಹೊಣೆ ಮತ್ತು ಅದರ ವ್ಯಾಪ್ತಿ

**ಉತ್ತಮ** ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸಮಾಜದ ಆಸ್ತಿಯೆನಿಸುತ್ತಾರೆ. ಒಬ್ಬ ಸಾಮಾನ್ಯನಿಗೂ ವಿದ್ಯಾರ್ಥಿಗೂ ಸಾಮಾಜಿಕವಾಗಿರುವ ಜವಾಬ್ದಾರಿಗಳು ಬೇರೆಯಾಗಿರುತ್ತವೆ. ವಿದ್ಯಾರ್ಥಿಯಾದವನು/ಳು ಇಂದಿನ ಸಮಾಜದಲ್ಲಿರುವ ಕುಂದು ಕೊರತೆಗಳನ್ನು ಗಮನಿಸಿ ತಾನು ನಾಗರಿಕನಾಗುವ ವೇಳೆಗೆ ಆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬೇಕಾಗುತ್ತದೆ. ಆಗ ಮಾತ್ರ ದಿನೇ ದಿನೇ ಸಮಾಜ ಸುಂದರವಾಗುತ್ತ ಬರುತ್ತದೆ. ಧೂಳಿನ ಕಣವನ್ನು ಸಾಗರದ ಮುತ್ತಾಗಿ ಪರಿವರ್ತಿಸುವ ಚಿಪ್ಪಿನ ಹುಳದಂತೆ ವಿದ್ಯಾರ್ಥಿಗಳು ತಾಳ್ಮೆಯಿಂದ ತಮ್ಮನ್ನು ತಾವು ಅತ್ಯುತ್ತಮ ಪ್ರಜೆಗಳಾಗಿ ಪರಿವರ್ತಿಸಿಕೊಳ್ಳಬೇಕು. ಸುಂದರವಾದ ಸಮಾಜ ನಿರ್ಮಾಣ ವಿದ್ಯಾರ್ಥಿಗಳ ಭವಿಷ್ಯದ ಹೊಣೆಯಾಗಿರುತ್ತದೆ. ಅವರು ಸ್ವತಂತ್ರ ಪ್ರವೃತ್ತಿಯುಳ್ಳವರಾಗಿರಬೇಕು. ಆದರೆ ಹಾಗೆಂದು ತಮ್ಮ ಮನ ಬಂದಂತೆ ನೀತಿನಿಯಮಗಳ ಉಲ್ಲಂಘನೆ ಮಾಡಿದರೆ ವಿದ್ಯಾರ್ಥಿಯು ತನ್ನ ತೇಜಸ್ಸನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಮಿತಿಯನ್ನರಿತು ವಿದ್ಯಾರ್ಥಿ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ. **—ಸಿರಿದೇವಿ ಹೆಚ್. ಎಸ್., ಅಂತಿಮ ಬಿ.ಎಸ್ಸಿ. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

**ಇಂದಿನ** ಮಕ್ಕಳೇ ಮುಂದಿನ ಪ್ರಜೆಗಳು ಎಂಬ ನಾಣ್ಣುಡಿಯನ್ನು ಎಲ್ಲರೂ ಕೇಳಿದ್ದೇವೆ. ಮುಂದೆ ದೇಶದ ಪ್ರಜೆಗಳಾಗುವಂಥ ಮಕ್ಕಳಲ್ಲಿ ಶೇಕಡಾ ೪೦ರಷ್ಟು ವಿದ್ಯೆಯಿಂದ ವಂಚಿತರಾಗುತ್ತಿದ್ದಾರೆ. ಇನ್ನು, ವಿದ್ಯೆ ಕಲಿಯುತ್ತಿರುವವರು ಶೇಕಡಾ ೬೦ರಷ್ಟು. ಅವರಲ್ಲಿ ಅಧಿಕ ವಿದ್ಯಾರ್ಥಿಗಳಿಗೆ ಸಾಮಾಜಿಕ ಹೊಣೆ ಬಗ್ಗೆ ಅಥವಾ ಅದರ ವ್ಯಾಪ್ತಿಯ ಬಗ್ಗೆ ಅರಿವಿರುವುದಿಲ್ಲ. ಆದುದರಿಂದ ವಿದ್ಯಾರ್ಥಿಗಳು ಪ್ರೌಢ ವಯಸ್ಸಿಗೆ ಬರುತ್ತಿದ್ದಂತೆ ಅವರಿಗೆ ಸಾಮಾಜಿಕ ಹೊಣೆಯ ಬಗ್ಗೆ ತಿಳುವಳಿಕೆ ನೀಡಬೇಕು. ಸಮಾಜದಲ್ಲಿ ವಿದ್ಯಾರ್ಥಿಗಳ ಪೋಷಕರೂ ಬಂಧುಗಳೂ ಸ್ನೇಹಿತರೂ ಸಾರ್ವಜನಿಕರೂ ಎಲ್ಲರೂ ಒಗ್ಗಟ್ಟಾಗಿ ಬೆಳೆಯುತ್ತಿರವುದರಿಂದ ಸಾಮರಸ್ಯ ಭಾವನೆ ಬೆಳೆಸಬೇಕು, ವಿಶ್ವಭ್ರಾತೃತ್ವ ಭಾವನೆ ಬೆಳೆಸಿಕೊಳ್ಳಬೇಕು, ದೇಶದ ಅಭಿವೃದ್ಧಿಯ ಬಗ್ಗೆ ಚಿಂತಿಸಬೇಕು, ಸ್ವಾರ್ಥ ಮನೋಭಾವನೆ ಇರಬಾರದು. ಒಟ್ಟಿನಲ್ಲಿ ಹೇಳಬೇಕೆಂದರೆ ಮಾನವೀಯತೆಯ ಭಾವನೆಗಳನ್ನು ಬೆಳೆಸುವಂಥ ಶಿಕ್ಷಣ ನೀಡಿದಾಗ ವಿದ್ಯಾರ್ಥಿಗಳ ಸಾಮಾಜಿಕ ಹೊಣೆಗೆ ಒಂದು ಅರ್ಥವಿರುತ್ತದೆ ಹಾಗೂ ಅದರ ವ್ಯಾಪ್ತಿ ಎಷ್ಟು ಎಂಬುದು ಅವರಿಗೇ ಅರಿವಾಗುತ್ತದೆ. **—ಮಂಜುನಾಥ. ಕೆ. ಜೆ.ಎಸ್.ಎಸ್., ಫಾರ್ಮಸಿ ಕಾಲೇಜು, ಮೈಸೂರು.**




**ಇಂದಿನ** ವಿದ್ಯಾರ್ಥಿಗಳು ನಾಳಿನ ಸಾಮಾಜಿಕ ಹೊಣೆ ಹೊರಲು ಸಮಪಾಲುದಾರರು. ದೇಶ ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳ ಪರಿಹಾರವನ್ನು ನಾವು ಯುವಶಕ್ತಿಯಲ್ಲಿ ಕಾಣಬಹುದು. ವಿದ್ಯಾರ್ಥಿಗಳಲ್ಲಿ ಪ್ರಮುಖವಾಗಿ ಇರಬೇಕಾದ ಸಾಮಾಜಿಕ ಹೊಣೆಗಳು: ಸಾರ್ವಜನಿಕ ಆಸ್ತಿಪಾಸ್ತಿಯ ಬಗ್ಗೆ ಕಾಳಜಿ, ಪರಿಸರ ರಕ್ಷಣೆ, ವನ್ಯಜೀವಿಗಳ ಸಂರಕ್ಷಣೆ ಮಾಡುವುದು, ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗದೆ ಭಾರತೀಯ ಸಂಸ್ಕೃತಿಯ ಅನುಸರಣೆ ಮತ್ತು ದೇಶದ ಸಂಸ್ಕೃತಿಯನ್ನು ಪಾಶ್ಚಾತ್ಯದೇಶಗಳಲ್ಲಿ ಪ್ರಚಾರ ಮಾಡುವುದು, ರಾಷ್ಟ್ರಧ್ವಜ, ರಾಷ್ಟ್ರಗೀತೆಗಳನ್ನು ಗೌರವಿಸುವುದು, ರಾಷ್ಟ್ರೀಯ ಹಬ್ಬಗಳನ್ನು ಆಚರಣೆ ಮಾಡುವುದು, ಚುನಾವಣೆಯಲ್ಲಿ ದೇಶದ ಸತ್ಪ್ರಜೆಯಾಗಿ ಒಳ್ಳೆಯ ಅಭ್ಯರ್ಥಿಗಳನ್ನು ಆರಿಸುವುದು, ಸರ್ಕಾರಿ ಉದ್ಯೋಗಗಳಿಗೆ ಮುಗಿಬೀಳದೆ ಸ್ವಂತ ಉದ್ಯೋಗಗಳನ್ನು ಮಾಡುವುದು, ಸಮಯದ ಸರಿಯಾದ ಪ್ರಯೋಜನ ಪಡೆಯುವುದು, ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆ ಕೊಡುವುದು, ಅನಕ್ಷರತೆಯನ್ನು ಸಂಪೂರ್ಣವಾಗಿ ಹೋಗಲಾಡಿಸಿ ಸಾಕ್ಷರತೆಯ ದೀಪವನ್ನು ಹಚ್ಚಲು ಪ್ರಯತ್ನಿಸುವುದು,

> **ನಿಮ್ಮ ವಿಚಾರದಲ್ಲಿಯೇ ಆಗಲಿ, ಬೇರೆಯವರ ವಿಚಾರದಲ್ಲಿಯೇ ಆಗಲಿ ಮಾನವೀಯತೆ ಕೇವಲ ಒಂದು ಉಪಕರಣವೆಂದು ಭಾವಿಸದೆ ಒಂದು ಗುರಿಯೆಂದು ಭಾವಿಸಿ ಕಾರ್ಯಪ್ರವೃತ್ತರಾಗಿ.**
>
> **—ಇಮ್ಯಾನುಯಲ್ ಕ್ಯಾಂಟ್** (Emmanuel Kant)

ಎಲ್ಲಾ ಭಾಷೆಗಳನ್ನು ಪ್ರೀತಿಸುವುದು, ಆದರೆ ಮಾತೃಭಾಷೆಯನ್ನು ಪೋಷಿಸುವುದು, ಸಮಸ್ಯೆಗಳ ಪರಿಹಾರವನ್ನು ನೇರವಾಗಿ ಪಡೆದುಕೊಳ್ಳುವುದು, ಅದಕ್ಕಾಗಿ ಗಲಭೆ, ಬಂದ್‌ಗಳು, ಪ್ರಾಣಹಾನಿ, ಸಾರ್ವಜನಿಕ ವಸ್ತುಗಳ ಹಾನಿಯನ್ನು ಮಾಡದೇ ಇರುವುದು ಮತ್ತು ಹಲವಾರು ಸಂಘ, ಸಂಸ್ಥೆಗಳನ್ನು ರಚಿಸಿ, ಸ್ವಯಂಪ್ರೇರಿತರಾಗಿ ದೇಶದ ಸರ್ವಾಂಗೀಣ ಪ್ರಗತಿಗೆ ಶ್ರಮಿಸುವುದು.**—ಭಾಗ್ಯಲಕ್ಷ್ಮಿ. ಎಚ್. ಅಂತಿಮ ಬಿ.ಎಸ್ಸಿ (ಪಿ.ಎಂ.ಸಿ), ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

**ವಿದ್ಯಾರ್ಥಿಗಳಿಗೆ,** ಮುಖ್ಯವಾಗಿ ಕಾಲೇಜಿನಲ್ಲಿ ಅಭ್ಯಸಿಸುವ ವಿದ್ಯಾರ್ಥಿಗೆ ಸಮಾಜದ ಆಗುಹೋಗುಗಳ ಪರಿಚಯವಿರುತ್ತದೆ. ಆ ಪರಿಚಯ ಮತ್ತು ಸ್ವಾನುಭವದಿಂದ ಅವನು ಸಾಮಾಜಿಕ ಹೊಣೆ ಹೊರಲು ಸಮರ್ಥನಿರುತ್ತಾನೆ. ಉದಾಹರಣೆಗೆ, ತನ್ನ ಜ್ಞಾನದ ಸೀಮಿತ ಮಟ್ಟದಲ್ಲೇ ತನ್ನ ಕಿರಿಯನಿಗೆ, ರ್ಯಾಗಿಂಗ್ ಮಾಡುವ ಬದಲು

ಮುಂದಿನ ಶಿಕ್ಷಣದ ಕುರಿತು ಮಾರ್ಗದರ್ಶನ ಕೊಡುವುದು ಕೂಡ ಒಂದು ಸಮಾಜದ ಹಿತದ ದೃಷ್ಟಿಯಲ್ಲಿ ಒಳ್ಳೆಯದೇ. ತನ್ನ ವಿದ್ಯಾಭ್ಯಾಸವನ್ನು ಸರಿಯಾಗಿ ಮಾಡುತ್ತಾ, ಇರುವ ಸಮಯವನ್ನು ಸದುಪಯೋಗ ಪಡಿಸಿಕೊಂಡು, ತನ್ನಿಂದ ಕೈಲಾದ ಮಟ್ಟಿಗೆ ಸೇವಾಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸಬಹುದು. ವಿದ್ಯಾರ್ಥಿಯಾಗಿರುವವನು ಮುಂದೆ ರಾಷ್ಟ್ರದ ಗೌರವಾನ್ವಿತ ಪ್ರಜೆಯಾಗಲಿರುವವನು, ಮುಂದಿನ ಸಮಾಜದ ಪ್ರಗತಿಗೆ ಅವನು ಈಗಿನಿಂದಲೇ ಜವಾಬ್ದಾರಿಯನ್ನು ತೆಗೆದುಕೊಂಡಲ್ಲಿ ತನ್ನ ಮೇಲೆ ಇಟ್ಟಿರುವ ತಂದೆ ತಾಯಿಗಳ ಮತ್ತು ಹಿರಿಯರ ನಂಬಿಕೆಗಳಿಗೆ ಉನ್ನತ ರೀತಿಯಲ್ಲಿ ಗೌರವ ಸಲ್ಲಿಸಿದಂತಾಗುತ್ತದೆ. ಇದು ಅವನ ಸಾಮಾಜಿಕ ಹೊಣೆಯಾಯಿತು. ಅದರ ವ್ಯಾಪ್ತಿಯನ್ನು ಹೀಗೇ ಎಂದು ವಿವರಿಸಲು ಸಾಧ್ಯವಿಲ್ಲ. ಇದು ವಿದ್ಯಾರ್ಥಿಯ ಆತ್ಮವಿಶ್ವಾಸ, ಧೀಶಕ್ತಿ, ಆರ್ಥಿಕ ಬಲ ಹಾಗೂ ಅವನ ಪರಿಸರದ ಮೇಲೆ ನಿಲ್ಲುತ್ತದೆ. ಒಬ್ಬ ಆರ್ಥಿಕವಾಗಿ ಬಲಾಢ್ಯ ವಿದ್ಯಾರ್ಥಿ ಆರ್ಥಿಕವಾಗಿ ಇನ್ನೊಬ್ಬನಿಗೆ ಸಹಾಯ ಮಾಡಬಹುದು. ಆದರೆ ಬಡ ವಿದ್ಯಾರ್ಥಿ? ತನ್ನ ಸ್ವಂತ ಶ್ರಮದ ಮೂಲಕ ಸೇವೆ ಸಲ್ಲಿಸಬಹುದು. ವಿದ್ಯಾರ್ಥಿ ದೆಸೆಯಲ್ಲಿಯೆ ಮಾನವೀಯತೆಯ ಭಾವವನ್ನು ಬೆಳೆಸಿಕೊಂಡರೆ ಮುಂದೆ ಅವನು ಸಮಾಜದಲ್ಲಿ ಜವಾಬ್ದಾರಿಯುತ ಪ್ರಜೆಯಾಗಿ ಬಾಳಲು ಸಾಧ್ಯವಾಗುತ್ತದೆ.

—ಹರ್ಷ.ಡಿ.ಕೆ., ಅಂತಿಮ ಬಿ.ಎಸ್ಸಿ.
ಯುವರಾಜ ಕಾಲೇಜು, ಮೈಸೂರು.

> ನೀವು ನಿಮ್ಮನ್ನು ಮೇಲೆತ್ತಬೇಕಾದರೆ ಇತರರನ್ನು ಮೇಲೆತ್ತಿ.
>
> —ಬೂಕರ್ ಟಿ. ವಾಷಿಂಗ್‌ಟನ್ (Booker T. Washinton)

**ವಿದ್ಯಾರ್ಥಿಗಳೇ** ಸಮಾಜದ ಉನ್ನತಿಗೆ ಕಾರಣರು. ವಿದ್ಯಾರ್ಥಿಗಳೆಂದ ಕೂಡಲೆ ಪುಸ್ತಕದ ಬದನೆಕಾಯಿ ಎನಿಸಿಕೊಳ್ಳುವುದು ಒಳಿತಲ್ಲ. ವಿದ್ಯಾರ್ಥಿಗಳು ಸಮಾಜದ ಸುಧಾರಕರಾಗಬೇಕು, ಸಮಾಜದ ಅನಿಷ್ಟವನ್ನು ತೊಡೆದುಹಾಕಬೇಕಾದ ಜವಾಬ್ದಾರಿ ಅವರ ಮೇಲಿದೆ. ದುಷ್ಟ ಪದ್ಧತಿಯ ವಿರುದ್ಧ ಬಡಿದೆದ್ದು ನಿಲ್ಲಬೇಕು, ಆಗಲೇ ಸಮಾಜದ ಸುಧಾರಣೆಯಾಗಲು ಸಾಧ್ಯ. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯದಲ್ಲಿ ತೊಡಗಬೇಕು ಮತ್ತು ಸಮಾಜದಲ್ಲಿ ಸ್ಫೂರ್ತಿ ಮೂಡಿಸಬೇಕು. ಸಮಯ ಸಿಕ್ಕಾಗ ಹಳ್ಳಿಗಳಿಗೆ ಹೋಗಿ ಅನಕ್ಷರಸ್ಥರಿಗೆ ಅಕ್ಷರ ಕಲಿಸಲು ಸಹಾಯ ಮಾಡಬೇಕು, ಅಲ್ಲಿಯ ಜನರನ್ನು ಸ್ನೇಹ, ಪ್ರೀತಿ, ಸ್ಫೂರ್ತಿ, ವಿಶ್ವಾಸದಿಂದ ಗೆಲ್ಲಬೇಕು. ವಿದ್ಯಾರ್ಥಿಗಳು ರಕ್ತದಾನ ಶಿಬಿರದಲ್ಲಿ ಪಾತ್ರವಹಿಸಬೇಕು. ಎಲ್ಲರಲ್ಲೂ ಕಣ್ಣಿನ ದಾನ ಶ್ರೇಷ್ಠದಾನ ಎಂಬ ಜಾಗೃತಿಯನ್ನು ಮೂಡಿಸಬೇಕು. ಏಡ್ಸ್ ಬಗ್ಗೆ ಅಲ್ಲಲ್ಲಿ ಶಿಬಿರವನ್ನು ನಡೆಸಿ, ಅದರ ಕಾರಣ, ತಡೆಗಟ್ಟುವ ಬಗ್ಗೆ ಮೂಢ ನಂಬಿಕೆಯನ್ನು ಹೋಗಲಾಡಿಸಬೇಕು. ಇಂತಹ ಅರಿವನ್ನು ವಿದ್ಯಾರ್ಥಿಗಳು ತಮ್ಮ ಮನೆಯಿಂದಲೇ ಪ್ರಾರಂಭಿಸಬಹುದು. ಹೀಗೆ ವಿದ್ಯಾರ್ಥಿಯ ಸಾಮಾಜಿಕ ಹೊಣೆಯ ವ್ಯಾಪ್ತಿ ಅನಂತ ಎನಿಸುತ್ತದೆ.

—ರಶ್ಮಿ. ಎಸ್., ತೃತೀಯ ಬಿ.ಎಸ್ಸಿ.,
ಮಹಾರಾಣಿ ಮಹಿಳಾ ಕಾಲೇಜು, ಮೈಸೂರು.

**ನಮ್ಮ** ಸಮಾಜ ಇಂದು ನಾನಾ ಕಷ್ಟಗಳಿಗೆ ಒಳಗಾಗಿದೆ. ಜನಸಂಖ್ಯೆ ಲಂಗುಲಗಾಮಿಲ್ಲದೆ ಬೆಳೆಯುತ್ತ ಇದೆ. ಅನಕ್ಷರಸ್ಥರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಯುವ ಜನಾಂಗದಲ್ಲಿ ಛಲದ ಕೊರತೆ ಉಂಟಾಗುತ್ತಿದೆ. ಸಮಾಜದಲ್ಲಿ ಅರಾಜಕತೆ ಹೆಚ್ಚುತ್ತಿದೆ. ಮನುಷ್ಯ ಮನುಷ್ಯರ ನಡುವೆ ದ್ವೇಷ ಅಸೂಯೆಗಳು ಭುಗಿಲೇಳುತ್ತಿವೆ.

ಹೀಗೆ ಸಮಸ್ಯೆಗಳು ಹನುಮಂತನ ಬಾಲದ ತರಹ ಬೆಳೆಯುತ್ತಲೇ ಇವೆ. ವಿದ್ಯಾರ್ಥಿಗಳು ಈ ಸಮಸ್ಯೆಗಳನ್ನು ಗುರುತಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಕೇವಲ ಒಂದೇ ಒಂದು ಸಮಸ್ಯೆಯ ಇತ್ಯರ್ಥಕ್ಕೆ ತನ್ನ ಜೀವನವನ್ನು ಮುಡುಪಾಗಿ ಇಟ್ಟರೆ, ಸೂರ್ಯ ಪ್ರಕಾಶದಲ್ಲಿ ಹಿಮ ಕರಗುವಂತೆ, ಸಮಸ್ಯೆಗಳ ಆಗರ ಕರಗುತ್ತದೆ. ಹೀಗಾಗಿ ವಿದ್ಯಾರ್ಥಿಯ ಸಾಮಾಜಿಕ ಹೊಣೆಗಳಿಗೆ ಇತಿಮಿತಿ ಎಂಬುದೇ ಇಲ್ಲವಾಗಿದೆ.

—ಅಜಯ್. ಬಿ.,L-155
ಎರಡನೇ ಹಂತ, ಕುವೆಂಪು ನಗರ, ಮೈಸೂರು.

**ವ್ಯಕ್ತಿಯು** ಸಮಾಜದಿಂದ ಬರುವವನಾಗಿದ್ದು ಅವನ ಬುದ್ಧಿ ವಿಕಾಸಗೊಳ್ಳುತ್ತ ವಿದ್ಯಾರ್ಥಿಯಾಗಿ ಸಮಾಜಕ್ಕೆ ಉತ್ತಮವಾದ ಸೇವೆಯನ್ನು ಸಲ್ಲಿಸಬೇಕು. ಈ ರೀತಿ ಸೇವೆ ಸಲ್ಲಿಸಲು ಅವನು ವಿದ್ಯಾರ್ಥಿಯಾಗಿದ್ದಾಗಲೇ ದುರ್ವ್ಯಸನಗಳಿಂದ ದೂರವಿದ್ದು ಸಮಾಜಕಂಟಕ ಚಟುವಟಿಕೆಗಳಲ್ಲಿ ಭಾಗಿಯಾಗದೆ, ಚಾರಿತ್ರಿಕ ಹಾಗೂ ಪೌರಾಣಿಕ ಮಹಾಪುರುಷರು ವಿದ್ಯಾರ್ಥಿಗಳಾಗಿದ್ದಾಗ ನಡೆದುಕೊಂಡ ರೀತಿಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮವಾದ ನಡತೆ, ತಿಳುವಳಿಕೆ ಇವುಗಳಿಂದ ತನಗೂ ಹಾಗೂ ಸಮಾಜಕ್ಕೂ ಸೇವೆ ಸಲ್ಲಿಸಬೇಕು.

ಈ ಸಾಮಾಜಿಕ ಹೊಣೆಯ ವ್ಯಾಪ್ತಿಯು ವಿಶಾಲವಾಗಿದ್ದು ತನ್ನ ತಂದೆ, ತಾಯಿ, ಸಹೋದರ, ಸಹೋದರಿಯರಿಗೆ ಸಹಾಯ ಮಾಡುವುದು, ವ್ಯಾಪಾರ ವಹಿವಾಟಿನಲ್ಲಿ ಸಹಕರಿಸುವುದು, ಬಡವರಿಗೆ, ರೋಗಿಗಳಿಗೆ, ಅಂಗವಿಕಲರಿಗೆ, ನಿಶ್ಶಕ್ತರಿಗೆ ತನ್ನ ಕೈಯಲ್ಲಾದ ಸೇವೆ ಸಹಾಯ ಮಾಡುವುದು, ವ್ಯವಸಾಯ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇತ್ಯಾದಿ.

—ಜಿ.ಎಸ್. ನಾಗಲಕ್ಷ್ಮಿ, ದ್ವಿತೀಯ ಬಿ.ಎಸ್ಸಿ.,
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

**ವಿದ್ಯಾರ್ಥಿಗಳ** ಜವಾಬ್ದಾರಿ ಬಹಳಷ್ಟೇ ಇದೆ. ಆದರೆ ವ್ಯವಸ್ಥಿತವಾದ ರೀತಿಯಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗುವಂತೆ ಮಾಡಬೇಕು. ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಮಕ್ಕಳಿಗೆ ಶಿಕ್ಷಣ ನೀಡುವುದು, ಶುಚಿತ್ವವನ್ನು ಕಾಪಾಡಿಕೊಳ್ಳುವ ಬಗ್ಗೆ ತಿಳಿಸುವುದು ಇತ್ಯಾದಿಗಳು ಎನ್.ಸಿ.ಸಿ. ಮತ್ತು ಎನ್. ಎಸ್.ಎಸ್ ಕಾರ್ಯಕ್ರಮಗಳಿಗಷ್ಟೇ ಸೀಮಿತವಾಗಿರದೆ ಪಠ್ಯಕ್ರಮದಲ್ಲಿ ಸೇರಿಸಿ ವಿದ್ಯಾರ್ಥಿಗಳನ್ನು ಪರೀಕ್ಷಿಸುವ ಕ್ರಮವನ್ನು ತಂದರೆ ಕೊನೆಯಪಕ್ಷ ಅಂಕಗಳಿಸಲಾದರೂ ವಿದ್ಯಾರ್ಥಿಗಳು ಸಾಮಾಜಿಕ ಕಾಳಜಿಯನ್ನು ಬೆಳೆಸಿಕೊಳ್ಳಬಹುದಾದ ಸಂಭವವಿದೆ.

—ವಿಜಯ್ ಅರಸ್. ಆರ್. ಎಸ್.,
ತೃತೀಯ ಬಿ.ಕಾಂ., ಮಹಾಜನ ಕಾಲೇಜು.

## ವಿದ್ಯಾರ್ಥಿಗಳು ದುರ್ವ್ಯಸನಗಳಿಗೆ ಬಲಿಯಾಗಲು ಕಾರಣವೇನು?

**ಇದಕ್ಕೆ** ಹಲವಾರು ಕಾರಣಗಳಿವೆ. ಮನೆಯೇ ಮೊದಲ ಪಾಠಶಾಲೆ ಎಂಬ ನುಡಿಯಂತೆ ಮನೆಯ ವಾತಾವರಣದಲ್ಲಿ ದುರ್ವ್ಯಸನಿಗಳ ಸಂಪರ್ಕ ಉಂಟಾದರೆ ವಿದ್ಯಾರ್ಥಿಗಳು ಸಹಜವಾಗಿ ಆ ಚಟಗಳಿಗೆ ಬಲಿಯಾಗುವರು. ಅಲಕ್ಷಿಸುವ ಧೋರಣೆಯ ಪೋಷಕರು ವಿದ್ಯಾರ್ಥಿಯ ದುರ್ವ್ಯಸನಕ್ಕೆ ಪರೋಕ್ಷವಾಗಿ ಕಾರಣ ರಾಗುವರು. ಮತ್ತೂ ಹಲವಾರು ವಿದ್ಯಾರ್ಥಿಗಳು ಸಹವಾಸ ದೋಷ ದಿಂದ ಮೋಜಿಗಾಗಿ, ತಮ್ಮ ಛಲಸಾಧನೆಗಾಗಿ ದುರ್ವ್ಯಸನಿಗಳಾಗು ತ್ತಾರೆ. ವಿಚಿತ್ರವೆಂದರೆ ಹಲವಾರು ವಿದ್ಯಾರ್ಥಿಗಳು ತಮ್ಮ ಅಂತಸ್ತಿಗೆ ಭೂಷಣವಾಗುವುದೆಂಬ ಭ್ರಮೆಗೆ ಒಳಗಾಗಿ ಮದ್ಯಪಾನಿಗಳ, ದುಷ್ಟರ ಸಹವಾಸಮಾಡುವುದು, ಅತ್ಯಾಚಾರಕ್ಕೆ ಕೈಹಾಕುವುದನ್ನು ಮಾಡುವರು. ಹೀಗೆ, ಬೆಳೆಯುತ್ತಿರುವ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರವಿಲ್ಲದೆ, ಆತ್ಮಾಭಿಮಾನ, ಸಜ್ಜನ ಸಹವಾಸದಿಂದ ವಂಚಿತ ರಾದರೆ ಅವರ ಮನಸ್ಸೇ ದುರ್ವ್ಯಸನಿಗಳಾಗಲು ಪ್ರೋತ್ಸಾಹಿಸುತ್ತದೆ.

**—ಸಿರಿದೇವಿ ಹೆಚ್. ಎಸ್. ಅಂತಿಮ ಬಿ.ಎಸ್ಸಿ.,**
**ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

> **ಜೀವಂತ ವಸ್ತುಗಳಾದ ಮರ, ಗಿಡ, ಹಕ್ಕಿ, ಪ್ರಾಣಿಗಳಿಂದ ಮತ್ತು ಜೀವಪೋಷಕಗಳಾದ ಮಣ್ಣು, ಬಯಲು, ಪರ್ವತ, ನದಿ, ಸಾಗರಗಳಿಂದ ದೂರ ಸರಿಯುತ್ತ ಜೀವವಿಲ್ಲದ ಟಿ.ವಿ., ಕಂಪ್ಯೂಟರ್, ಕಾರು ಮೊದಲಾದವುಗಳ ಜೊತೆ ಸಂಪರ್ಕ ಮಾಡಿದಂತೆಲ್ಲ ನಾವು ಬದುಕಿಗೆ ವಿಮುಖರಾಗುತ್ತೇವೆ.**

**ವಿದ್ಯಾರ್ಥಿ** ಎಂದರೆ ಜ್ಞಾನಕ್ಕಾಗಿ ಹಂಬಲಿಸುತ್ತಿರುವವನು, ಪ್ರಜ್ಞೆಯಿಂದ ಕೂಡಿರುವವನು ಮತ್ತು ಪ್ರತಿಯೊಬ್ಬರನ್ನು ಪ್ರೀತಿಸುವ ಮನೋಭಾವ ಇರುವಂತಹವನು. ಇಂತಹ ವಿದ್ಯಾರ್ಥಿ ವ್ಯಭಿಚಾರ, ಕಳ್ಳತನ, ಮಾದಕದ್ರವ್ಯಗಳಂತಹ ದುಶ್ಚಟಗಳಿಗೆ ಬಲಿಯಾಗಿ ಅಶಾಂತಿ ಯಿಂದ ನರಳಲು ಪ್ರಮುಖ ಕಾರಣ ಅವನ ಸುತ್ತಲ ಪರಿಸರ ಮತ್ತು ಮೌಲ್ಯಾಧಾರಿತ ಶಿಕ್ಷಣಗಳ ಕೊರತೆ.

ಜೀವಂತ ವಸ್ತುಗಳಾದ ಮರ, ಗಿಡ, ಹಕ್ಕಿ, ಪ್ರಾಣಿಗಳಿಂದ ಮತ್ತು ಜೀವಪೋಷಕಗಳಾದ ಮಣ್ಣು, ಬಯಲು, ಪರ್ವತ, ನದಿ, ಸಾಗರಗಳಿಂದ ದೂರ ಸರಿಯುತ್ತ ಜೀವವಿಲ್ಲದ ಟಿ.ವಿ., ಕಂಪ್ಯೂಟರ್, ಕಾರು ಮೊದಲಾದವುಗಳ ಜೊತೆ ಸಂಪರ್ಕ ಮಾಡಿದಂತೆಲ್ಲ ನಾವು ಬದುಕಿಗೆ ವಿಮುಖರಾಗುತ್ತೇವೆ. ಆಗ ನಮ್ಮಲ್ಲಿ ನಮ್ಮ ಬಗ್ಗೆ ನಮ್ಮ ಬದುಕಿನ ಬಗ್ಗೆ ಪ್ರೀತಿ ಕಳೆದುಹೋಗಿ ಜೀವನದಲ್ಲಿ ಮಜಾ ಮಾಡಬೇಕೆಂಬ ಪಶುಪ್ರವೃತ್ತಿ ಬೆಳೆಯುತ್ತದೆ.

ಇಂದಿನ ಶಿಕ್ಷಣ ಸಂಸ್ಥೆಗಳು ಪೈಪೋಟಿ ಬೆಳೆಸುವ ಕೇಂದ್ರ ಗಳಾಗಿವೆ. ಹೆತ್ತವರ ನಿರೀಕ್ಷೆ ಮಟ್ಟಕ್ಕೆ ತಾವು ಬರುವೆವೋ ಇಲ್ಲವೋ ಎನ್ನುವ ಕಳವಳದ ಹೊರೆ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರಿ ಮಾನಸಿಕವಾಗಿ ಬಳಲುತ್ತಾರೆ. ಜೊತೆಗೆ ಪೋಷಕರ ಒತ್ತಡದಿಂದ ಅಭಿರುಚಿ ಇಲ್ಲದಂತಹ ಶಿಕ್ಷಣವನ್ನು ಮಕ್ಕಳಿಗೆ ಕೊಡಿಸಿ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತಾಗಿ ಅವರು ಅಡ್ಡದಾರಿಗಿಳಿಯಲು ಕಾರಣವಾಗಿದೆ. ತಂದೆ ತಾಯಿಯವರ ಬಿಡುವಿಲ್ಲದ ಉದ್ಯೋಗದ ಕಾರಣ ಚಿಕ್ಕಂದಿನಲ್ಲಿ ಪ್ರೀತಿಯಿಂದ ವಂಚಿತರಾಗಿ, ಗುರುಶಿಷ್ಯರಲ್ಲಿ ಪ್ರೀತಿ ವಿಶ್ವಾಸವಿಲ್ಲದೆ, ನೈತಿಕ ಶಿಕ್ಷಣದ ಕೊರತೆಯಿಂದ ದುರ್ವ್ಯಸನಿ ಗಳಾಗುತ್ತಾರೆ.

**—ರತ್ನಾಕರ ಎಂ.ಜಿ. ,ಅಂತಿಮ ಬಿ.ಎಸ್ಸಿ.,**
**ಮಾನಸಗಂಗೋತ್ರಿ.**

**ಮಕ್ಕಳನ್ನು** ಮೊದಲ ಐದು ವರ್ಷ ಮುದ್ದಿನಿಂದ, ನಂತರ ಹದಿನೈದರವರೆಗೆ ದಂಡನೆಯಿಂದ, ತದನಂತರ ಹಿತವಚನದಿಂದ ಸರಿದಾರಿಯಲ್ಲಿ ನಡೆಸಬೇಕೆಂಬುದು ಶಾಸ್ತ್ರಗಳ ಅಭಿಮತ. ಆದರೆ ಇಂದಿನ ಮಾತಾಪಿತೃಗಳು ಮಕ್ಕಳನ್ನು ಬಾಲ್ಯದಿಂದಲೇ ಸ್ನೇಹಿತನಂತೆ ಕಿವಿಮಾತಿನಿಂದಲೇ ತಿದ್ದಲು ಯತ್ನಿಸುತ್ತಾರೆ. ಮಕ್ಕಳ ತಪ್ಪಿಗೆ ಸೂಕ್ತ ದಂಡನೆ ಇಲ್ಲವಾಗಿದೆ ಮತ್ತು ಮಕ್ಕಳಿಗೆ ಅತಿಯಾದ ಸ್ವಾತಂತ್ರ್ಯ ನೀಡಲಾಗುತ್ತಿದೆ. ಮಕ್ಕಳು ಕೇಳಿದಾಗಲೆಲ್ಲಾ ಹಣ ನೀಡುವ ಪೋಷಕರು, ಆ ಹಣ ಏತಕ್ಕೆ ಎಂದು ಕೇಳಿ ಮಕ್ಕಳ ಸ್ವಾತಂತ್ರ್ಯಕ್ಕೆ(?) ಧಕ್ಕೆ ತರುವುದಿಲ್ಲ. 'ಚಾರಿತ್ರ್ಯಹೀನ ಶಿಕ್ಷಣ ಒಂದು ಪಾಪ' ಎಂದು ಘೋಷಿಸಿದ ಗಾಂಧೀಜಿಯವರ ನಾಡಿನಲ್ಲಿ ಇಂದು ನೈತಿಕ ಶಿಕ್ಷಣಕ್ಕೆ ಕಡೆಯ ಸ್ಥಾನ ಅಥವಾ ಪ್ರಾಯಶಃ ಅದೂ ಇಲ್ಲ. ದಶಕಗಳ ನೀತಿ ರಹಿತ ಶಿಕ್ಷಣದ ಫಲಿತವಾಗಿ ಇಂದು ನಾವು ಹುಡುಕಿದರೂ ಸಮಾಜ ದಲ್ಲಿ ಆದರ್ಶ ವ್ಯಕ್ತಿಗಳು ಕಾಣುವುದಿಲ್ಲ. ರಾಜಕೀಯ ನಾಯಕರು, ಸಮಾಜದ ಗಣ್ಯರು ಅಷ್ಟೇ ಏಕೆ, ನಮ್ಮ ಶಾಲೆಗಳ ಗುರುಗಳೂ ದುರ್ವ್ಯಸನಕ್ಕೆ ದಾಸರಾಗಿರುವುದನ್ನು ಕಾಣುತ್ತೇವೆ. ಕೇಬಲ್ ಜಾಲ ನಮ್ಮ ವಿದ್ಯಾರ್ಥಿಗಳ ನೈತಿಕತೆಗೆ ಬಲು ದೊಡ್ಡ ಹೊಡೆತ ನೀಡುತ್ತಿದೆ. ಇಂದಿನ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೂ ಪ್ರೇಮ, ಕಾಮ, ಕೊಲೆ, ಅತ್ಯಾಚಾರ, ಅಫೀಮು, ಗಾಂಜಾಗಳ ಪರಿಚಯವಾಗುತ್ತಿದೆ. ಆದರೆ ದುರ್ದೈವ, ಇವರಿಗೆ ಗಾಂಧೀಜಿ, ವಿವೇಕಾನಂದ, ಸುಭಾಷ್‌ಚಂದ್ರ ಬೋಸ್, ವಿಶ್ವೇಶ್ವರಯ್ಯನವರ ಪರಿಚಯವಾಗು ವುದೇ ಇಲ್ಲ. ಹೀಗೆ ಕುಟುಂಬದಲ್ಲಿನ ಅನಿಯಂತ್ರಿತ ಸ್ಥಿತಿ, ಅನಾ ಯಾಸವಾಗಿ ಸಿಗುವ ಹಣ, ನೀತಿರಹಿತ ಶಿಕ್ಷಣ, ಆದರ್ಶಹೀನ ಸಮಾಜ ಮತ್ತು ಮಾಧ್ಯಮಗಳ ಹೊಡೆತ— ಇವುಗಳಿಂದ ವಿದ್ಯಾರ್ಥಿ ಗಳು ದುರ್ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ. —ವಿಶ್ವನಾಥ. ಎ.

**ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿ, ಮೈಸೂರು.**

**ಮುಖ್ಯವಾಗಿ** ವಿದ್ಯಾರ್ಥಿಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಇಲ್ಲದಿರುವುದು ದುರ್ವ್ಯಸನಗಳಿಗೆ ಬಲಿಯಾಗಲು ಕಾರಣ. ಜೊತೆಗೆ ಬೇಜವಾಬ್ದಾರಿ ತಂದೆತಾಯಿಗಳು, ಸಮಾಜ, ಅಲ್ಪ ಮತ್ತು ಕ್ಷಣಿಕ ಸುಖಕ್ಕಾಗಿ ಹಾತೊರೆಯುವ ತಿಳುವಳಿಕೆಯಿಲ್ಲದ ಮನಸ್ಸು, ತಾನೂ ಕೆಟ್ಟು ತನ್ನ ಸುತ್ತ ಮುತ್ತ ಇರುವವರೆಲ್ಲರನ್ನೂ ದುರ್ಮಾರ್ಗಕ್ಕೆ ಎಳೆಯುವ ಗೆಳೆಯರು, ಎಲ್ಲಾ ವಿಧಗಳಿಂದಲೂ ಹಣ

ಮಾಡಬೇಕೆಂಬ ಸರ್ಕಾರ ನೀತಿ, ಮಾದಕ ವಸ್ತುಗಳ ಕಾನೂನನ್ನು ಸರಿಯಾಗಿ ಜಾರಿಗೊಳಿಸದ ಸರ್ಕಾರೀ ಇಲಾಖೆಗಳು ವಿದ್ಯಾರ್ಥಿಗಳನ್ನು ದುರ್ವ್ಯಸನಗಳಿಗೆ ಬಲಿಯಾಗಲು ಸಹಕರಿಸುತ್ತಿವೆ. ಇಂದು ಜನರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಕಷ್ಟಸಹಿಷ್ಣುತೆಯ ಗುಣಗಳಿಲ್ಲ. ದುಶ್ಚಟಗಳಿಂದ ದೇಹದ ಮೇಲೆ, ಮನಸ್ಸಿನ ಮೇಲೆ ಉಂಟಾಗುವ ದುಷ್ಪ ಪರಿಣಾಮಗಳ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲ. ಇವೆಲ್ಲವೂ ದುರ್ವ್ಯಸನಗಳಿಗೆ ಬಲಿಯಾಗಲು ಸಹಕರಿಸುತ್ತವೆ.

—ಉಷಾರಾಣಿ. ಆರ್., ದ್ವಿತೀಯ ಎಲ್.ಎಲ್.ಬಿ.
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

ವಿದ್ಯಾರ್ಥಿಗಳು ದುರ್ವ್ಯಸನಗಳಿಗೆ ಬಲಿಯಾಗಲು ಪ್ರಮುಖ ಕಾರಣ ಅವರ ವಿದ್ಯಾರ್ಥಿಜೀವನಕ್ಕೆ ಒಗ್ಗದ ಸುತ್ತಲ ವಾತಾವರಣ ಒಂದಾದರೆ ಮತ್ತೊಂದು ಪ್ರಮುಖ ಕಾರಣ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತಿರುವ ಆತ್ಮಸ್ಥೈರ್ಯ, ಆತ್ಮವಿಶ್ವಾಸದ ಕೊರತೆ. ಈಗಿನ ಕಾಲದ ವಿದ್ಯಾರ್ಥಿಗಳಿಗೆ ಎಲ್ಲವೂ ಸುಲಭವಾಗಿ ದೊರೆಯಬೇಕು, ಚಿಕ್ಕಂದಿನಿಂದ ಬದುಕಿನ ಬವಣೆಯಿಂದ ಮಕ್ಕಳನ್ನು ದೂರವಿಡುವ ತಂದೆತಾಯಿಗಳು ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವುದಿಲ್ಲ.

ಮಕ್ಕಳು ತಾಯಿತಂದೆಯರು ತಮ್ಮಲ್ಲಿ ಅದುಮಿಟ್ಟ ಪ್ರವೃತ್ತಿಗಳನ್ನೇ ಪಡೆಯುತ್ತಾರೆ. ತಾಯಿತಂದೆಯರು ಏನನ್ನು ಆಲೋಚಿಸುತ್ತಾರೋ ಏನನ್ನು ಕನಸು ಕಾಣುತ್ತಾರೊ ಮತ್ತು ಏನು ಮಾಡಬೇಕೆಂದು ಹಂಬಲಿಸುತ್ತಾರೊ ಅವನ್ನೇ ಮಕ್ಕಳು ಪಡೆಯುತ್ತವೆ.
— ಇಲಾ ವ್ಹೀಲರ್ ವಿಲ್‌ಕಾಕ್ಸ್ (Ella Wheeler Wilcox)

ಬದಲು ತಮ್ಮದೇ ಆಸೆ, ಆಕಾಂಕ್ಷೆಗಳನ್ನು ವಿದ್ಯಾರ್ಥಿಗಳ ಮೇಲೆ ಹೇರುವ ತಂದೆತಾಯಿಗಳು ತಮ್ಮ ಬುಡಕ್ಕೆ ಕೊಡಲಿ ಪೆಟ್ಟು ಹಾಕಿಕೊಳ್ಳುವುದರ ಜೊತೆಗೆ ದೇಶದ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆ. ತಂದೆತಾಯಿಯರ ಗುರುವರ್ಗದವರ ಪ್ರೀತಿಯಿಂದ ವಂಚಿತರಾಗುವ ವಿದ್ಯಾರ್ಥಿಗಳು ಹೆಚ್ಚಾಗಿ ದುರ್ವ್ಯಸನಕ್ಕೆ ಬಲಿಯಾಗುತ್ತಾರೆ.

—ಭಾಗ್ಯಲಕ್ಷ್ಮಿ. ಎಚ್., ಅಂತಿಮ ಬಿ.ಎಸ್ಸಿ
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

ವಿದ್ಯಾರ್ಥಿಗಳ ಸುತ್ತಮುತ್ತಲಿನ ಸಮಾಜವು ವಿದ್ಯಾರ್ಥಿಗಳನ್ನು ಸರಿಯಾದ ಮಾರ್ಗದಲ್ಲಿ ಹೋಗಲು ಬಿಡುವುದಿಲ್ಲ. ತಾನೂ ಸರಿಯಾದ ದಾರಿಯಲ್ಲಿ ಹೋಗುವುದಿಲ್ಲ. ವಿದ್ಯಾರ್ಥಿಗಳು ಸಮಾಜಕ್ಕೆ ಒಳ್ಳೆಯದನ್ನು ಮಾಡಿದರೂ ದೂಷಿಸುತ್ತದೆ ಹಾಗೂ ಕೆಟ್ಟದನ್ನು ಮಾಡಿದರೂ ದೂಷಿಸುತ್ತದೆ. ಸತ್ಯಧರ್ಮದ ದಾರಿಯಲ್ಲಿ ನಡೆದರೆ ಇವನು ಸತ್ಯ ಹರಿಶ್ಚಂದ್ರನ ತುಂಡು ಎಂದು ಹಾಸ್ಯ, ವ್ಯಂಗ್ಯ ಮಾಡುತ್ತಾರೆ. ಹಾಗೆಯೆ ಅಸತ್ಯ, ಅನ್ಯಾಯ, ಅಧರ್ಮದ ದಾರಿಯಲ್ಲಿ ನಡೆದರೆ ಅವನಿಗೆ ಕಳ್ಳ, ಸುಳ್ಳ, ರೌಡಿ ಎಂದು ಪಟ್ಟ ಕಟ್ಟಿಬಿಡುತ್ತದೆ. ಹಾಗಾಗಿ ವಿದ್ಯಾರ್ಥಿಯು ತನ್ನ ಸುತ್ತಮುತ್ತಲಿನ ಸಮಾಜದ ವರ್ತನೆಯನ್ನು ನೋಡಿ ನೋಡಿ ಬೇಸತ್ತು ಅವನು ಯಾವುದೋ ಒಂದು ಕೆಟ್ಟ ಚಾಳಿಗೆ ಇಳಿಯುತ್ತಾನೆ.

ಈಗಿನ ಕಾಲೇಜಿನ ೭೦% ವಿದ್ಯಾರ್ಥಿಗಳು ಮಾದಕ ವಸ್ತುಗಳ ಬಲೆಗೆ ಬಿದ್ದು ನರಳುತ್ತಿದ್ದಾರೆ. ಕಾಲೇಜಿನ ಅಕ್ಕಪಕ್ಕದಲ್ಲಿ ಬೀಡಿ, ಸಿಗರೇಟ್, ಬೀಡಾ, ಗುಟ್ಕಾ ಇತ್ಯಾದಿ ಅಂಗಡಿಗಳು ಇರುವುದರಿಂದ ಕಾಲೇಜಿಗೆ ಬರುವ ಶೇ ೬೦ರಷ್ಟು ವಿದ್ಯಾರ್ಥಿಗಳು ಅವನ್ನು ಸೇವಿಸಿ ಅದರ ಗುಲಾಮರಾಗಿಬಿಡುತ್ತಾರೆ. ಹಾಗೂ ಇತ್ತೀಚಿನ ದಿನಗಳಲ್ಲಿ ಡ್ರಗ್ಸ್ ಎಂಬ ಮಾದಕ ವಸ್ತುಗಳು ಯುವ ವಿದ್ಯಾರ್ಥಿಗಳನ್ನು ಬಹುಬೇಗನೆ ತನ್ನ ಕಡೆಗೆ ಸೆಳೆದುಕೊಂಡು ಅವರಿಗೆ ನರಕದಲ್ಲಿ ಸಿಗುವ ಕಷ್ಟವನ್ನು ಭೂಲೋಕದಲ್ಲಿ ತೋರಿಸಿಕೊಡುತ್ತವೆ. ಇದರ ಬಗ್ಗೆ ಸರ್ಕಾರವು ಏನೇ ಕ್ರಮ ಕೈಗೊಂಡರೂ ಇದನ್ನು ಬಳಸುವವರ ಸಂಖ್ಯೆಯನ್ನು ಮಿತಿಯಲ್ಲಿಡಲು ಸಾಧ್ಯವಾಗುತ್ತಿಲ್ಲ. ಇದು ಬಹಳ ಬೇಗನೆ ಹಣ ಸಂಪಾದನೆ ಮಾಡುವ ಸಾಧನವಾಗಿ ಬಿಟ್ಟಿದೆ. ಕಾನೂನಿನ ದೃಷ್ಟಿಯಲ್ಲಿ ಇದೂ ಒಂದು ದೊಡ್ಡ ಅಪರಾಧ. ಈ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಕೊಟ್ಟರೂ ಸಾಲದು.

ಶ್ರೀಮಂತರುಗಳು ಬಗೆಬಗೆಯ ಅಶ್ಲೀಲ ಪುಸ್ತಕಗಳು ಮತ್ತು ಚಲನಚಿತ್ರಗಳನ್ನು ತಯಾರಿಸಿ ಬಿಡುಗಡೆ ಮಾಡುತ್ತಾರೆ. ಆದರೆ ಅದನ್ನು ನೋಡಿದ, ಓದಿದ ಯುವ ವಿದ್ಯಾರ್ಥಿಗಳು ಕೆಟ್ಟ ದಾರಿ ಹಿಡಿದು ಹಾಳಾಗುತ್ತಾರೆ. ಹೀಗೆ ಮಾಡುವ ವ್ಯಕ್ತಿಗಳನ್ನು ಕಾನೂನು ಏನು ಮಾಡಲೂ ಸಾಧ್ಯವಾಗುತ್ತಿಲ್ಲ. ಇದನ್ನು ತಡೆಗಟ್ಟಬೇಕಾದರೆ ಒಂದು ಕ್ರಾಂತಿಯೇ ಆಗಬೇಕಾಗಿದೆ.

—ವಿಷ್ಣು. ಎಚ್., ದ್ವಿತೀಯ ಬಿ.ಕಾಂ.
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

ನೀವು ನೀಡುವ ಭೌತಿಕ ವಸ್ತುಗಳಿಗಾಗಿ ಮಕ್ಕಳು ನಿಮ್ಮನ್ನು ನೆನೆಸಿಕೊಳ್ಳುವುದಿಲ್ಲ. ಆದರೆ ನೀವು ತೋರಿದ ಅಪಾರ ಪ್ರೀತಿಗಾಗಿ ನೆನೆಸಿಕೊಳ್ಳುತ್ತಾರೆ.
— ರಿಚರ್ಡ್ ಎಲ್ ಇವಾನ್ಸ್ (Richard L. Evans)

ಕ್ಷಣಿಕ ಸುಖದ ವ್ಯಾಮೋಹ ಮತ್ತು ಪಾರಮಾರ್ಥಿಕ ಸುಖದ ತಿಳುವಳಿಕೆಯ ಕೊರತೆಯೇ ಈ ದುರ್ವ್ಯಸನಗಳಿಗೆ ಕಾರಣ ಎಂಬುದು ಕಂಡುಬರುತ್ತದೆ. ಇಂದಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಕಣ್ಣಿಗೆ ಕಾಣುವ ಪ್ರಾಪಂಚಿಕ ವಸ್ತುಗಳಲ್ಲಿ ಅತಿರೇಕದ ವ್ಯಾಮೋಹ, ಮಾದಕ ವಸ್ತುಗಳಿಗೆ ಮಾಧ್ಯಮದ ಮೂಲಕ ಸಿಗುತ್ತಿರುವ ಜಾಹಿರಾತು ಮತ್ತು ಅದನ್ನು ಪ್ರಚಾರಪಡಿಸುವ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಹಾದಿ ತಪ್ಪಿಸುವುದರಲ್ಲಿ ಸಫಲವಾಗಿವೆ. ಕಾಮಪ್ರಚೋದಕ ಲೈಂಗಿಕ ಜಾಹಿರಾತುಗಳನ್ನು ಮತ್ತು ಚಿತ್ರಗಳನ್ನು ಪ್ರದರ್ಶಿಸುವ ದೃಶ್ಯಮಾಧ್ಯಮ ವಿದ್ಯಾರ್ಥಿಗಳನ್ನು ಯಶಸ್ವಿಯಾಗಿ ಅಧಃಪತನದ ದಾರಿಯಲ್ಲಿ ನಡೆಸಿವೆ. ವಿದ್ಯಾರ್ಥಿಗಳಿಗೆ ಹಿಂದೆ ಸಿಗುತ್ತಿದ್ದ ಜೀವನದ ಪರಿಪೂರ್ಣ ಪರಿಕಲ್ಪನೆ ಇಂದು ಸಿಗದೆ, ವಿದ್ಯಾರ್ಥಿಯು ಕೇವಲ ಚಟಗಳೇ ಜೀವನದಲ್ಲಿ ಸುಖವನ್ನು ನೀಡುವುದು ಎಂಬ ತಪ್ಪು ಕಲ್ಪನೆಯನ್ನು ಹೊಂದಿದ್ದಾನೆ. ಇವೆಲ್ಲಾ ಕಾರಣಗಳು ಏನೇ ಇರಬಹುದು, ಆದರೆ, ಮುಖ್ಯವಾಗಿ ಆತ್ಮವಿಶ್ವಾಸದ ಕೊರತೆಯೆ ಇದಕ್ಕೆಲ್ಲ ಕಾರಣ ಎಂಬುದು ಮಾತ್ರ ಸತ್ಯ.

—ಹರ್ಷ. ಡಿ.ಕೆ., ಅಂತಿಮ ಬಿ.ಎಸ್ಸಿ.,
ಯುವರಾಜ ಕಾಲೇಜು, ಮೈಸೂರು

**ವಿದ್ಯಾರ್ಥಿಗಳಲ್ಲಿ** ಅನುಕರಣ ಪ್ರವೃತ್ತಿ ಪ್ರಬಲವಾಗಿರುತ್ತದೆ. ಇತರರ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ. ದುರ್ವ್ಯಸನಗಳಿಗೆ ಅವರು ಬಲಿಯಾಗುವುದಕ್ಕೆ ಇದು ಮುಖ್ಯ ಕಾರಣ. ವಿದ್ಯಾರ್ಥಿಗಳು ವಿಕಾಸಗೊಳ್ಳುವಾಗ ಸಮಾಜದ ಕೆಲವು ಕೆಟ್ಟ ವ್ಯಕ್ತಿಗಳು ಮಾಡುವ ಮತ್ತು ನಡೆದುಕೊಳ್ಳುವ ರೀತಿಯಲ್ಲಿ ತಾವೂ ನಡೆಯಲು ಮನಸ್ಸನ್ನು ಕೊಟ್ಟು ದುರ್ವ್ಯಸನಗಳಾದ ಬೀಡಿ, ಸಿಗರೇಟು, ಮಾದಕ ದ್ರವ್ಯಗಳು, ತಂಬಾಕಿಗೆ ಸಂಬಂಧ ಪಟ್ಟ ದುಶ್ಚಟಗಳಿಗೆ ಒಳಗಾಗುತ್ತಾರೆ.—ಜಿ.ಎಸ್. ನಾಗಲಕ್ಷ್ಮಿ,ದ್ವಿತೀಯ ಬಿ. ಎಸ್ಸಿ.,
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

**ಸಮೂಹ** ಮಾಧ್ಯಮಗಳಾದ ಟಿವಿ., ಸಿನೆಮಾ, ಅಶ್ಲೀಲ ನೃತ್ಯಗಳು ಮತ್ತು ವಿಶೇಷ ಸೌಲಭ್ಯಗಳನ್ನು ಒದಗಿಸುವ ಹೋಟೆಲ್‌ಗಳು ಪ್ರಮುಖ ಕಾರಣವಾಗಿವೆ. ಟಿವಿಯನ್ನಂತೂ ಯುವ ಜನಾಂಗದ ಮೇಲಿನ ಬಾಂಬ್ ಎಂದೇ ಹೇಳಬಹುದು.

> ಟಿವಿ ಉಪಯುಕ್ತ ಮಾಹಿತಿಯನ್ನು ನೀಡುವ ಶಕ್ತಿಯನ್ನು ಹೊಂದಿದೆ ನಿಜ.... ಆದರೆ ಟಿವಿ ನೋಡುವ ಅನುಭವವೇ ಕಲಿಕೆಗೆ ತಡೆಯನ್ನುಂಟುಮಾಡುತ್ತದೆ. ವಿಶ್ಲೇಷಣೆ ಮತ್ತು ಚಿಂತನೆಯನ್ನು ಅವಲಂಬಿಸಿದ ಅತ್ಯಲ್ಪ ಜ್ಞಾನಾರ್ಜನೆ ಟಿವಿ ನೋಡುವುದರ ಮೂಲಕ ದೊರೆಯುತ್ತದೆ.

— ಪ್ರಬುದ್ಧ ಭಾರತ

ಕೆಲವರು ಪ್ರಪಂಚದಲ್ಲಿ ಎಲ್ಲರಿಗಿಂತಲೂ ತಮ್ಮ ಸಮಸ್ಯೆಗಳೇ ಹೆಚ್ಚು ಎಂಬ ಅಂಧ ವಿಶ್ವಾಸದಿಂದ ಕೂಡಿರುತ್ತಾರೆ, ಮತ್ತು ಅದನ್ನು ಮರೆಯಲು ಈ ದುರ್ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ. ಇನ್ನೂ ಕೆಲವರು ತಮ್ಮ ಸ್ನೇಹಿತರ ಕೆಟ್ಟ ಪ್ರಭಾವ ಮತ್ತು ಒತ್ತಾಯದ ಮೇರೆಗೆ ಒಮ್ಮೆ ರುಚಿ ನೋಡಿ, ನಂತರ ತಾವೇ ಸ್ವತಃ ಅದರ ಚಟಕ್ಕೆ ಬಲಿಯಾಗಿ ಬಿಡುತ್ತಾರೆ. ಬಹುಬೇಗ 'ಮಜ' ಪಡೆಯಬೇಕೆಂಬ ಯಾಂತ್ರಿಕ ಹುಚ್ಚು ಅಪೇಕ್ಷೆಯ ಪರಿಣಾಮದಿಂದ ಹಾಗೂ ತಮ್ಮಲ್ಲಿರುವ ಹಣ ಖರ್ಚುಮಾಡಲು ಮಾರ್ಗೋಪಾಯಗಳನ್ನು ಹುಡುಕುತ್ತಾ ಸುಲಭ ವಾಗಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗುತ್ತಾರೆ. ತಂದೆ-ತಾಯಿಗಳ ನಿರ್ಲಕ್ಷ್ಯ, ಅವರ ನಡುವೆ ಬರುವ ಕಲಹ, ವಿರಸ, ವಿವಾಹ ವಿಚ್ಛೇದನ, ಕುಟುಂಬದಲ್ಲಿ ಯಾರಾದರೂ ಮದ್ಯಪಾನಿಗಳಾಗಿರುವುದು, ಉದ್ಯೋಗಸ್ಥ ತಂದೆ-ತಾಯಿಗಳು ಮಕ್ಕಳ ಬಗ್ಗೆ ತೋರಿಸುವ ಅಸಡ್ಡೆ— ಇವುಗಳು ವಿದ್ಯಾರ್ಥಿಗಳು ದುರ್ವ್ಯಸನಗಳಿಗೆ ಬಲಿಯಾಗಲು ಪ್ರೇರೇಪಿಸುತ್ತವೆ. —ಶೀಲಾ. ಎಂ.
ಕುವೆಂಪು ನಗರ, ಮೈಸೂರು

ಇಂದಿನ ದಿನಗಳಲ್ಲಿ ದುಶ್ಚಟಗಳು ಒಂದು ಫ್ಯಾಶನ್ ಆಗಿ ಮಾರ್ಪಟ್ಟಿದೆ. ಸಿಗರೇಟು, ಬೀಡ, ಮದ್ಯ, ಗಾಂಜಾ, ಅಫೀಮು ಇವುಗಳು ವಿದ್ಯಾರ್ಥಿಗಳಿಗೆ ತಾನು ವಿದ್ಯಾರ್ಥಿ ಎಂದು ಹೇಳಿಕೊಳ್ಳುವ 'ರಾಜ ಚಿಹ್ನೆ'ಗಳಾಗಿವೆ. ಇದಕ್ಕೆ ಕಾರಣಗಳು ಅನೇಕ. ಮನೆಯಲ್ಲಿನ ಕೆಟ್ಟ ಪರಿಸರ, ಮಕ್ಕಳ ಮೇಲೆ ಬಹುತೇಕ ಪರಿಣಾಮ ಬೀರುತ್ತದೆ. ತಂದೆ-ತಾಯಿ ಕುಳಿತು ಕುಡಿಯುತ್ತಿದ್ದರೆ ಮಗು ಹೇಗೆ ರಾಷ್ಟ್ರದ ಸಂಪತ್ತಾಗುತ್ತದೆ? ಅದು ಹಾಲು ಕುಡಿಯುವ ವಯಸ್ಸಿಗೇ ಆಲ್ಕೋಹಾಲು ಬಯಸುತ್ತದೆ. ಹಾಗೆಯೇ ಕೆಟ್ಟ ಸ್ನೇಹಿತರು ಕೂಡ ದುಶ್ಚಟಗಳಿಗೆ ಕಾರಣ. 'ನಿನ್ನ ಸ್ನೇಹಿತರ ಬಗ್ಗೆ ಹೇಳು, ನಾನು ನಿನ್ನ ಬಗ್ಗೆ ಹೇಳುವೆ' ಎಂಬ ಆಂಗ್ಲ ಮಾತು ಇಲ್ಲಿ ಪ್ರಸ್ತುತ.

ಮುಖ್ಯವಾಗಿ ಪಾಶ್ಚಾತ್ಯರ ಅಂಧಾನುಕರಣೆ. ಅವರಲ್ಲಿರುವ ಶಿಸ್ತು, ಬುದ್ಧಿವಂತಿಕೆಯನ್ನು ಬೆಳೆಸಿಕೊಳ್ಳದೆ ಅವರ ಕೆಟ್ಟಗುಣಗಳ ಅನುಕರಣೆಯ ಯತ್ನ ಇದಕ್ಕೆ ಕಾರಣ ಎನ್ನಬಹುದು. ಇದಲ್ಲದೆ ಶಿಕ್ಷಣದಲ್ಲಿ ನೈತಿಕ ಮೌಲ್ಯ ತುಂಬಾ ಕುಸಿದಿದೆ. ನೈತಿಕತೆ ಇಲ್ಲವಾದಾಗ ವಿವೇಚನಾ ಶಕ್ತಿ ಇರುವುದಿಲ್ಲ. ನಾನು ಏನು ಮಾಡುತ್ತಿದ್ದೇನೆ ಎಂಬ ಅರಿವು ಕೂಡ ವಿದ್ಯಾರ್ಥಿಗಳಲ್ಲಿ ಇರುವುದಿಲ್ಲ. ಇಂದಿನ ವಿದ್ಯಾರ್ಥಿಗಳಲ್ಲಿ ಆತ್ಮಗೌರವ ಇಲ್ಲದಿರುವುದು, ಒಂದುರೀತಿಯ ದಾಸ್ಯ ಮನೋಭಾವ ಇರುವುದು, ಬೇರೆಯವರ ಬಗ್ಗೆ ಭಯ ಇಲ್ಲದಿರುವುದು, ಸಾಮಾಜಿಕ ಶಿಸ್ತು ಇಲ್ಲದಿರುವುದು ಒಟ್ಟಾರೆ ಒಬ್ಬ ವಿದ್ಯಾರ್ಥಿಯನ್ನು ಅಧೋಗತಿಯತ್ತ ಕೊಂಡೊಯ್ಯುತ್ತಿವೆ. ದುಶ್ಚಟಗಳು ಮೊಳಕೆಯೊಡೆದು ಬೆಳೆಯುವುದು ಈ ರೀತಿಯ ಮನೋಭಾವವಿರುವರಲ್ಲೇ ಎನ್ನಬಹುದು.

— ಎಸ್. ಎನ್ ಸೀತಾರಾಮು, ಮೈಸೂರು.

ಕೆಲವು ಕಾಲೇಜುಗಳಲ್ಲಿ ರ್‍ಯಾಗಿಂಗ್‌ಗೆ ಬಲಿಯಾದ ಮುಗ್ಧ ವಿದ್ಯಾರ್ಥಿಗಳಿಗೆ ಬಲವಂತವಾಗಿ ಮಾದಕ ವಸ್ತುಗಳನ್ನು ಸೇವಿಸುವಂತೆ ಮಾಡಲಾಗುತ್ತದೆ. ಕೆಲವು ಕಾಲೇಜುಗಳ ಹತ್ತಿರವೇ ಮಾದಕ ವಸ್ತುಗಳನ್ನು ಮಾರಾಟ ಮಾಡುವುದರಿಂದ ಅವರ ಗಮನ ಆ ಕಡೆ ಸೆಳೆಯುತ್ತದೆ. ಕೆಲವು ವಿದ್ಯಾರ್ಥಿಗಳು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸಲು ಹೋಗಿ ಇಂತಹ ದುರ್ವ್ಯಸನಗಳಿಗೆ ಬಲಿಯಾಗುತ್ತಾರೆ.—ನಾಗಲಾಂಬಿಕೆ. ಬಿ, ದ್ವಿತೀಯ ಬಿ.ಕಾಂ., ಜೆ.ಎಸ್.ಎಸ್.
ಮಹಿಳಾ ಕಾಲೇಜು, ಮೈಸೂರು.

ವಿದ್ಯಾರ್ಥಿಗಳು ದುರ್ವ್ಯಸನಗಳಿಗೆ ಬಲಿಯಾಗಲು ಪ್ರಮುಖ ಕಾರಣ, ತಮ್ಮ ಬಗ್ಗೆ ತಮಗೆ ನಂಬಿಕೆಯಿಲ್ಲದಿರುವುದು. ವಿದ್ಯಾರ್ಥಿಗಳನ್ನು ತಪ್ಪು ದಾರಿಗೆ ಎಳೆಯಲು ಸಾವಿರಾರು ದಾರಿಗಳಿವೆ. ಆದರೆ ಅವಕ್ಕೆ ಬಲಿಯಾಗುವವನು ಎಂಥವನು? ತನ್ನ ಬಗ್ಗೆ ತನಗೇ ನಂಬಿಕೆಯಿಲ್ಲವೆಂದೇ ಆಯಿತಲ್ಲ. ಟಿವಿ, ಸಿನಿಮಾ, ಸ್ನೇಹಿತರ ಪ್ರಭಾವ ಇವೆಲ್ಲ ಗೌಣ. —ವಿದ್ಯಾ ವಿಠ್ಠಲ,ತೃತೀಯ ಬಿ.ಎಸ್ಸಿ. ,
ಮಹಾರಾಣಿ ಕಾಲೇಜು, ಮೈಸೂರು

ಆಶ್ರಮದ ವಿಶೇಷ ಕಾರ್ಯಕ್ರಮಗಳು

ಮೇ 2001

| | | |
|---|---|---|
| 7 | ಸೋಮವಾರ | ಬುದ್ಧ ಜಯಂತಿ |
| 20 | ಭಾನುವಾರ | ಆಧ್ಯಾತ್ಮಿಕ ಶಿಬಿರ |

( ಮಧ್ಯಾಹ್ನ ೩.೦೦ರಿಂದ ೭.೦೦ರವರೆಗೆ )

ಪ್ರತಿ ಶನಿವಾರ ಇಂಗ್ಲೀಷಿನಲ್ಲಿ ಮತ್ತು ಭಾನುವಾರ ಕನ್ನಡದಲ್ಲಿ ಸಂಜೆ 6.00 ರಿಂದ 7.00 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ನಡೆಯುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ